# ಕರ್ನಾಟಕ ವಿಧಾನ ಪರಿಷತ್ತು

ಪ್ರಸ್ತಾವ:

ರಾಜ್ಯದಲ್ಲಿ ಈ ಹಿಂದಿನ ನೋಂದಣಿ ಕಾಯಿದೆ ಜಾರಿಯಲ್ಲಿ ಇರುವುದು ಸರಿಯಷ್ಟೆ ಇತ್ತೀಚಿಗೆ ರಾಜ್ಯ ಸರ್ಕಾರವು ಈ ಕಾಯಿದೆಗೆ ಅಂದರೆ ನೋಂದಣಿ ಕಾಯಿದೆಯನ್ನು (ಕರ್ನಾಟಕ ತಿದ್ದುಪಡಿ ಅಧಿನಿಯಮ, 2025) ದಿನಾಂಕ:28-7-2025 ರಿಂದ ಜಾರಿಗೆ ತಂದಿರುತ್ತದೆ. ರಾಜ್ಯ ಸರ್ಕಾರವು ನೋಂದಣಿ ಕಾಯಿದೆಗೆ ತಂದಿರುವ ತಿದ್ದುಪಡಿಯಲ್ಲಿ ನೋಂದಾಯಿತ ಜನರಲ್ ಪವರ್ ಆಫ್ ಅಟಾರ್ನಿಗಳಿಗೆ ದಸ್ತಾವೇಜುಗಳ ನೋಂದಣಿಗೆ ಎಲ್ಲಾ ರೀತಿಯ ಮಾನ್ಯತೆ ನೀಡಿರುವುದು ಸರಿಯಷ್ಟೆ. ಆದರೆ ಈ ತಿದ್ದುಪಡಿ ಕಾಯಿದೆಯಡಿಯಲ್ಲಿ ಕಾಯಿದೆ ತಿದ್ದುಪಡಿಗೆ ಮುಂಚೆ ಹಾಗೂ ನೋಂದಣಿ ಆಗದೆ ಇರುವ ಜಿ.ಪಿ.ಎ.ಗಳಿಗೆ ನೀಡದಿರುವ ರಕ್ಷಣೆಗಳು ಮತ್ತು ಸುರಕ್ಷತೆಗಳ ಬಗ್ಗೆ ಸಾರ್ವಜನಿಕರಲ್ಲಿ ಗೊಂದಲಗಳಿರುತ್ತವೆ. ತಿದ್ದುಪಡಿ ಕಾಯಿದೆ ಜಾರಿಗೆ ಬಂದ ನಂತರ, ನೋಂದಣಾಧಿಕಾರಿಗಳ ಕಛೇರಿಗಳಲ್ಲಿ ನೋಂದಾಯಿತ ಜಿ.ಪಿ.ಎ.ಗಳನ್ನು ಮಾತ್ರ ಪುರಸ್ಕರಿಸಲಾಗುತ್ತಿರುವುದರಿಂದ ಮತ್ತು ಈ ಹಿಂದೆ ನೋಟರಿಯವರಿಂದ ದೃಢೀಕೃತವಾದ ಮತ್ತು ನೋಂದಣಿಯಾಗದೆ ಇರುವ ಜಿ.ಪಿ.ಎ.ಗಳನ್ನು ತಿರಸ್ಕರಿಸಲಾಗುತ್ತಿರುವುದರಿಂದ ಶ್ರೀಸಾಮಾನ್ಯರಿಗೆ ಹೆಚ್ಚಿನ ತೊಂದರೆಯಾಗುತ್ತಿದೆ. ಈ ಹಿನ್ನೆಲೆಯಲ್ಲಿ ಸಾರ್ವಜನಿಕರ ಅತಿ ಮಹತ್ವದ ವಿಷಯವನ್ನೊಳಗೊಂಡಂತೆ ಈ ಎಲ್ಲಾ ಅಂಶಗಳ ಬಗ್ಗೆ ಚರ್ಚಿಸುವ ಕುರಿತು ಮಾನ್ಯ ವಿಧಾನಪರಿಷತ್ತಿನ ಸದಸ್ಯರಾದ ಶ್ರೀ ಟಿ.ಎನ್. ಜವರಾಯಿಗೌಡ (ವಿಧಾನಸಭಾ ಕ್ಷೇತ್ರ), ಇವರು ನಿಯಮ-330 ರಡಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ.

ಉತ್ತರ:

ಕರ್ನಾಟಕ ಸರ್ಕಾರ (ವ್ಯವಹಾರ ನಿರ್ವಹಣೆ) ನಿಯಮಗಳು-1977 ರನ್ವಯ ದಿನಾಂಕ:14-03-2025 ರಂದು ನಡೆದ ಸಚಿವ ಸಂಪುಟವು ನಿರ್ಣಯಿಸಿದಂತೆ, The Registration (Karnataka Amendment) Bill-2025ಕ್ಕೆ ವಿಧಾನ ಮಂಡಲದ (2025ರ ವಿಧಾನಸಭೆಯ ವಿಧೇಯಕ ಸಂಖ್ಯೆ:13) ಎರಡು ಸದನಗಳ ಅನುಮೋದನೆ ಪಡೆದು, ದಿನಾಂಕ:22-07-2025 ರಂದು ಗೌರವಾನ್ವಿತ ರಾಷ್ಟ್ರಪತಿಗಳ ಸಹಮತಿ ಪಡೆದು, ಅಧಿಸೂಚನೆ ಸಂಖ್ಯೆ:ಸಂವ್ಯಶಾಇ 18 ಶಾಸನ 2025, ದಿನಾಂಕ: 28-07-2025ರ ಮೂಲಕ ಕರ್ನಾಟಕ ರಾಜ್ಯಪತ್ರದ ವಿಶೇಷ ರಾಜ್ಯ ಪತ್ರಿಕೆಯಲ್ಲಿ 2025ರ ಕರ್ನಾಟಕ ಅಧಿನಿಯಮ ಸಂಖ್ಯೆ:42/2025 ಎಂದು ಅಧಿಸೂಚಿಸಲಾಗಿದೆ. ಸದರಿ ಅಧಿಸೂಚನೆಯಲ್ಲಿ ನೋಂದಣಿ ಕಾಯ್ದೆ 1908ರ ಕಲಂ 17(f) ಕ್ಕೆ ತಿದ್ದುಪಡಿ ಮಾಡಲಾಗಿರುತ್ತದೆ.

ಸದರಿ ಅಧಿನಿಯಮದ ಬಗ್ಗೆ ಸರ್ಕಾರದ ಅಧಿಸೂಚನೆ ಸಂಖ್ಯೆ: ಕಂಇ/9/ಎಂಎನ್ಎಂಯು/2025/ಇ, ದಿನಾಂಕ:13-08-2025ರಲ್ಲಿ ಅಧಿಸೂಚನೆ ಹೊರಡಿಸಲಾಗಿರುತ್ತದೆ. ಅದರಂತೆ, ದಿನಾಂಕ:13-08-2025 ರಿಂದ ಅಧಿಕಾರ ಪತ್ರದಲ್ಲಿ (ಜನರಲ್ ಪವರ್ ಆಫ್ ಅಟಾರ್ನಿ) ಅಧಿಕಾರ ಕೊಡುವವರು ಅವರ ಸ್ವತ್ತನ್ನು ವರ್ಗಾವಣೆ/ಮಾರಾಟ ಮಾಡಲು ಪ್ರತಿಫಲದ ಮೊತ್ತ ಪಡೆದು ಅಥವಾ ಪಡೆಯದೇ ಅಧಿಕಾರ ಕೊಟ್ಟಲ್ಲಿ ಅಂತಹ ಅಧಿಕಾರ ಪತ್ರಗಳನ್ನು ಕಡ್ಡಾಯವಾಗಿ ನೋಂದಣಿ ಮಾಡಬೇಕಾಗಿರುತ್ತದೆ.

ಈ ತಿದ್ದುಪಡಿ ಕಾಯಿದೆ ಅಡಿಯಲ್ಲಿ ತಿದ್ದುಪಡಿಗೆ ಮುಂಚೆ ಹಾಗೂ ನೋಂದಣಿ ಆಗದೆ ಇರುವ ಜಿ.ಪಿ.ಎ ಗಳಿಗೆ ನೀಡದಿರುವ ರಕ್ಷಣೆಗಳು ಮತ್ತು ಸುರಕ್ಷತೆಗಳ ಬಗ್ಗೆ ಸಾರ್ವಜನಿಕರಲ್ಲಿ ಇರಬಹುದಾದ ಗೊಂದಲಗಳ ಕುರಿತು ಸೂಕ್ತ ಸ್ಪಷ್ಟೀಕರಣವನ್ನು ಇಲಾಖೆ ವತಿಯಿಂದ ನೀಡಿ ಗೊಂದಲಗಳನ್ನು ಪರಿಹರಿಸುವ ಕುರಿತು ಕ್ರಮ ಕೈಗೊಳ್ಳಲಾಗುವುದು.

**ಸಂಖ್ಯೆ:**ಕಂಇ/128/ಎಂಎನ್‌ಎಸ್‌ಎ/2026/ಇ

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು